# ಸಂಕಲನಾತ್ಮಕ ಮೌಲ್ಯಮಾಪನ–1

ಅರ್ಧವಾರ್ಷಿಕ ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ನೀಲನಕ್ಷೆ

ತರಗತಿ: 9ನೇ ತರಗತಿ ವಿಷಯ: ಸಮಾಜ ವಿಜ್ಞಾನ

---

## ವಿಭಾಗವಾರು ಮತ್ತು ಪ್ರಶ್ನೆವಾರು ಅಂಕ ಹಂಚಿಕೆ

| ವಿಭಾಗ | MCQ | 1 Q | 2Q | 3Q | 4Q | 5Q | ಒಟ್ಟು ಪ್ರಶ್ನೆ | ಒಟ್ಟು ಅಂಕ |
|---|---|---|---|---|---|---|---|---|
| ಇತಿಹಾಸ | 1(2) | 1(2) | 2(2) | 3(3) | 4(2) | 00 | 11 | 25 |
| ರಾಜ್ಯಶಾಸ್ತ್ರ | 1(1) | 1(1) | 2(1) | 3(1) | 4(1) | 00 | 05 | 11 |
| ಸಮಾಜಶಾಸ್ತ್ರ | 1(2) | 1(1) | 2(1) | 3(1) | 00 | 00 | 05 | 08 |
| ಭೂಗೋಳಶಾಸ್ತ್ರ | 1(1) | 1(2) | 2(2) | 3(2) | 4(1) | 5(1) | 09 | 22 |
| ಅರ್ಥಶಾಸ್ತ್ರ | 1(1) | 1(1) | 2(1) | 3(1) | 00 | 00 | 04 | 07 |
| ವ್ಯ. ಅಧ್ಯಯನ | 1(1) | 1(1) | 2(1) | 3(1) | 00 | 00 | 04 | 07 |
| ಒಟ್ಟು | 8(8) | 8(8) | 16(8) | 27(9) | 16(4) | 5(1) | 38 | 80 |

## ಉದ್ದಿಷ್ಟವಾರು ಅಂಕ ಹಂಚಿಕೆ

| ಕ್ರ ಸಂ | ಉದ್ದಿಷ್ಟ | ಅಂಕ | ಶೇಕಡವಾರು |
|---|---|---|---|
| 1 | ಜ್ಞಾನ | 13 | 16% |
| 2 | ತಿಳುವಳಿಕೆ | 40 | 50% |
| 3 | ಅನ್ವಯ | 22 | 28% |
| 4 | ಕೌಶಲ | 5 | 6% |
| | ಒಟ್ಟು | 80 | 100% |

# ಘಟಕವಾರು ಅಂಕ ಹಂಚಿಕೆ

| ಕ್ರ. ಸಂ | ಘಟಕಗಳು | ಜ್ಞಾನ | | | | | | ತಿಳುವಳಿಕೆ | | | | | | ಅನ್ವಯ | | | | | | ಕೌಶಲ್ಯ | | | | | | ಒಟ್ಟು ಪ್ರಶ್ನೆ | ಒಟ್ಟು ಅಂಕ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ.ನಿ | 01 | 02 | 03 | 04 | 05 | ವ.ನಿ | 01 | 02 | 03 | 04 | 05 | ವ.ನಿ | 01 | 02 | 03 | 04 | 05 | ವ.ನಿ | 01 | 02 | 03 | 04 | 05 | | |
| 1 | ಪಾಶ್ಚಾತ್ಯ ರಿಲಿಜನ್ ಗಳು | 1(1) | | | | | | | | | | 1(4) | | | | | 1(3) | | | | | | | | | 03 | 08 |
| 2 | 6 ರಿಂದ 14ನೇ ಶತಮಾನದ ಭಾರತ | | | 1(2) | | | | | 1(1) | | | 1(4) | | | | | 1(3) | | | | | | | | | 03 | 07 |
| 3 | ಭಾರತದ ಮತ ಪ್ರವರ್ತಕರು | | 1(1) | | | | | | | | 1(3) | | | | | | | | | | | | | | | 02 | 04 |
| 4 | ವಿಜಯನಗರ ಸಾಮ್ರಾಜ್ಯ ಮತ್ತು ಬಹಮನಿ ರಾಜ್ಯ | | | 1(2) | | | | 1(1) | | | 1(3) | 1(4) | | | | | | | | | | | | | | 03 | 06 |
| 5 | ನಮ್ಮ ಸಂವಿಧಾನ | 1(1) | | | | | | | | 1(2) | | | | | | | | 1(4) | | | | | | | | 02 | 05 |
| 6 | ಕೇಂದ್ರ ಸರ್ಕಾರ | | | | | | | | | 1(2) | | | | | | | 1(3) | | | | | | | | | 01 | 02 |
| 7 | ರಾಜ್ಯ ಸರ್ಕಾರ | | | | | | | | | | | | | | | | 1(3) | | | | | | | | | 01 | 03 |
| 8 | ನ್ಯಾಯಾಂಗ | | | | | | | | 1(1) | | | | | | | | | | | | | | | | | 01 | 01 |
| 9 | ಕುಟುಂಬ | 1(1) | | | | | | 1(1) | | | | | | | 1(1) | 1(2) | 1(3) | | | | | | | | | 05 | 08 |
| 10 | ನಮ್ಮ ರಾಜ್ಯ-ಕರ್ನಾಟಕ- ಪ್ರಾಕೃತಿಕ ವಿಭಾಗಗಳು | | | 1(2) | | | | | | | 1(3) | | | 1(1) | | | | | | | | | | | 5* | 04 | 11 |
| 11 | ಕರ್ನಾಟಕದ ಪ್ರಾಕೃತಿಕ ವೈವಿಧ್ಯ | | 1(1) | | | | | | | | 1(3) | | | | | | | 1(4) | | | | | | | | 02 | 05 |
| 12 | ಕರ್ನಾಟಕದ ಜಲಸಂಪನ್ಮೂಲಗಳು | | | | | | | | | 1(2) | 1(3) | | | | | | | | | | | | | | | 02 | 05 |
| 13 | ಕರ್ನಾಟಕದ ಭೂ ಸಂಪತ್ತು | | | | | | | | 1(1) | | | | | | | | | | | | | | | | | 01 | 01 |
| 14 | ಆರ್ಥಿಕ ರಚನೆ | | | | | | | | | 1(2) | | | | | | | | | | | | | | | | 01 | 02 |
| 15 | ಭಾರತೀಯ ಅರ್ಥವ್ಯವಸ್ಥೆಯ ವಲಯಗಳು | | 1(1) | | | | | 1(1) | | | 1(3) | | | | | | | | | | | | | | | 03 | 05 |
| 16 | ವ್ಯವಹಾರ ನಿರ್ವಹಣೆ | 1(1) | | | | | | | | 1(2) | 1(3) | | | | 1(1) | | | | | | | | | | | 04 | 07 |
| | ಒಟ್ಟು | 10(13) | | | | | | 18(40) | | | | | | 9(22) | | | | | | 1(05) | | | | | | 38 | 80 |

# ಸಂಕಲನಾತ್ಮಕ ಮೌಲ್ಯಮಾಪನ-1

ಅಂಕಗಳು:-80

ತರಗತಿ:- 9ನೇ ತರಗತಿ    ವಿಷಯ:- ಸಮಾಜ ವಿಜ್ಞಾನ    ಸಮಯ-3 ಗಂಟೆ

**I. ಈ ಕೆಳಗಿನ ಬಹುಆಯ್ಕೆ ಪ್ರಶ್ನೆಗಳಿಗೆ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ:** 8X1=8

1. ಏಸುಕ್ರಿಸ್ತರು ಹುಟ್ಟಿದ ಸ್ಥಳ
   ಎ) ಮೆಕ್ಕಾ ಬಿ) ಬೆತ್ಲಹ್ಯಾಂ ಸಿ) ಮದೀನಾ ಡಿ) ರೋಮ್
2. ಕಂಪಣನ ದಂಡಯಾತ್ರೆಯ ಬಗ್ಗೆ ತಿಳಿಸುವುದು
   ಎ) ಶಿವತತ್ವ ಚಿಂತಾಮಣಿ ಬಿ) ಬಸವ ಪುರಾಣ ಸಿ) ಪ್ರಭುಲಿಂಗಲೀಲೆ ಡಿ)ಮಧುರಾವಿಜಯಂ
3. ಸಂವಿಧಾನ ರಚನಾ ಸಭೆಯ ಅಧ್ಯಕ್ಷರು
   ಎ) ಬಾಬು ರಾಜೇಂದ್ರ ಪ್ರಸಾದ್ ಬಿ) ಅಂಬೇಡ್ಕರ್ ಸಿ) ಜವಹರ್ ಲಾಲ್ ನೆಹರು ಡಿ) ಗಾಂಧೀಜಿ
4. ಸಮಾಜದ ಜೀವಕೋಶ
   ಎ) ಕುಟುಂಬ ಬಿ) ಶಾಲೆ ಸಿ) ಗ್ರಾಮ ಡಿ) ರಾಜ್ಯ
5. ಕೇಂದ್ರ ಕುಟುಂಬದಲ್ಲಿ ಕಂಡುಬರುವ ಲಕ್ಷಣ
   ಎ) ವಾಸಸ್ಥಳ ಬಿ) ದೊಡ್ಡ ಗಾತ್ರ ಸಿ) ಚಿಕ್ಕ ಗಾತ್ರ ಡಿ) ಅಧಿಕಾರ ಸಂರಚನೆ
6. ಕರ್ನಾಟಕ ಎಂದು ಮರುನಾಮಕರಣ ಮಾಡಿದ ವರ್ಷ
   ಎ) 1963 ಬಿ) 1973 ಸಿ) 1985 ಡಿ) 1992
7. ತೃತೀಯ ವಲಯಕ್ಕೆ ಉದಾಹರಣೆ
   ಎ) ಕೈಗಾರಿಕೆ ಬಿ) ಕೃಷಿ ಸಿ) ಹೈನುಗಾರಿಕೆ ಡಿ) ಬ್ಯಾಂಕಿಂಗ್
8. ನಿರ್ವಹಣೆಯ ತತ್ವಗಳನ್ನು ನೀಡಿದವರು
   ಎ) ಹೆನ್ರಿ ಫಯೋಲ್ ಬಿ) ಪ್ರೊ. ಕೋಲಿನ್ ಕ್ಲಾರ್ಕ್ ಸಿ) ಅಮರ್ತ್ಯ ಸೇನ್ ಡಿ) ಬಾಲ್ಡವಿನ್

**II. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯಗಳಲ್ಲಿ ಉತ್ತರಿಸಿರಿ:** 8X1=8

9. ಮೊದಲ ಪಾಣಿಪತ್ ಕದನ ಯಾವಾಗ ನಡೆಯಿತು?
10. ಮಧ್ವಾಚಾರ್ಯರು ಪ್ರತಿಪಾದಿಸಿದ ಸಿದ್ಧಾಂತ ಯಾವುದು?
11. ಸರ್ವೋಚ್ಚ ನ್ಯಾಯಾಲಯವು ಯಾವಾಗ ಅಸ್ಥಿತ್ವಕ್ಕೆ ಬಂದಿತು?
12. ಕುಟುಂಬವನ್ನು ಅರ್ಥೈಸಿ.
13. ಬೇಸಿಗೆ ಕಾಲವು ಯಾವ ತಿಂಗಳುಗಳಲ್ಲಿ ಇರುತ್ತದೆ?
14. ಸಾಗುವಳಿಗೆ ಲಭ್ಯವಿಲ್ಲದ ಭೂಮಿಗೆ ಉದಾಹರಣೆ ಕೊಡಿ.
15. ಪ್ರಾಥಮಿಕ ವಲಯವನ್ನು ವ್ಯಾಖ್ಯಾನಿಸಿ.
16. ನಿರ್ಧಾರ ಕೈಗೊಳ್ಳುವುದು ಎಂದರೇನು?

**III. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿರಿ:** 8X2=16

17. ಮೊಹಮ್ಮದ್-ಬಿನ್-ತುಘಲಕ್ ಜಾರಿಗೊಳಿಸಿದ ಆಡಳಿತ ಸುಧಾರಣೆಗಳಾವುವು?
18. ವಿಜಯನಗರ ಸಾಮ್ರಾಜ್ಯವನ್ನು ಆಳಿದ ನಾಲ್ಕು ರಾಜ ಮನೆತನಗಳನ್ನು ಹೆಸರಿಸಿ.
19. ಸಂವಿಧಾನದಲ್ಲಿ ಅಳವಡಿಸಿರುವ ಮೂಲಭೂತ ಹಕ್ಕುಗಳಾವುವು?
    ಅಥವಾ
    ಲೋಕಸಭೆಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳು ಯಾವುವು?
20. ಕುಟುಂಬವು ಸಮಾಜದ ಘಟಕ ಹೇಗೆ?
    ಅಥವಾ
    ಕುಟುಂಬದ ಪ್ರಕಾರಗಳಾವುವು?

21. ಕರ್ನಾಟಕದ ನಾಲ್ಕು ಆಡಳಿತ ವಿಭಾಗಗಳಾವುವು?

22. ಕಾವೇರಿ ನದಿಯ ಉಪನದಿಗಳಾವುವು?

23. ಆದಾಯದ ಮೂಲಗಳು ಯಾವುವು?

24. ನಿಯಂತ್ರಣದ ಪ್ರಮುಖ ಧ್ಯೇಯಗಳೇನು?

## IV. ಈ ಕೆಳಗಿನ ಪ್ರಶ್ನೆಗಳಿಗೆ ಐದು ಆರು ವಾಕ್ಯಗಳಲ್ಲಿ ಉತ್ತರಿಸಿರಿ: 9X3=27

25. ಜೀಸಸ್‌ಕ್ರಿಸ್ತರ ಬೋಧನೆಗಳನ್ನು ವಿವರಿಸಿ.

ಅಥವಾ

ದೆಹಲಿ ಸುಲ್ತಾನರು ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರಕ್ಕೆ ಅಮೂಲ್ಯ ಕೊಡುಗೆಗಳನ್ನು ನೀಡಿದ್ದಾರೆ. ಹೇಗೆ ಸ್ಪಷ್ಟೀಕರಿಸಿರಿ.

26. ಅದ್ವೈತ ಸಿದ್ಧಾಂತವನ್ನು ಕುರಿತು ವಿವರಿಸಿ.

27. ಕೃಷ್ಣದೇವರಾಯನು ಅಧಿಕಾರಕ್ಕೆ ಬಂದಾಗ ಎದುರಿಸಿದ ಸಮಸ್ಯೆಗಳಾವುವು?

28. ರಾಜ್ಯಸಭೆಯ ರಚನೆಯನ್ನು ವಿವರಿಸಿ.

ಅಥವಾ

ರಾಜ್ಯಪಾಲರ ಅರ್ಹತೆ, ಅಧಿಕಾರ ಅವಧಿಯನ್ನು ವಿವರಿಸಿ.

29. ಅವಿಭಕ್ತ ಕುಟುಂಬದ ಲಕ್ಷಣಗಳಾವುವು?

30. ಮಲೆನಾಡು ಪ್ರದೇಶದ ಲಕ್ಷಣಗಳನ್ನು ಪಟ್ಟಿಮಾಡಿರಿ.

31. ಕರ್ನಾಟಕವನ್ನು ಶ್ರೀಗಂಧದ ನಾಡು ಎಂದು ಏಕೆ ಕರೆಯುತ್ತಾರೆ?

ಅಥವಾ

ನಮ್ಮ ರಾಜ್ಯದ ಪ್ರಮುಖ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಹೆಸರಿಸಿ.

32. ಭಾರತೀಯ ಕೃಷಿ ವಲಯದ ಪ್ರಾಮುಖ್ಯತೆಯನ್ನು ವಿವರಿಸಿ.

33. ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದ ಸಂದರ್ಭಗಳಲ್ಲಿ ಗಮನದಲ್ಲಿಟ್ಟುಕೊಳ್ಳಬೇಕಾದ ಅಂಶಗಳನ್ನು ವಿವರಿಸಿ.

## V. ಈ ಕೆಳಗಿನ ಪ್ರಶ್ನೆಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿರಿ: 4X4=16

34. ಮಹಮ್ಮದ್ ಗವಾನನು ಬಹಮನಿ ರಾಜ್ಯದಲ್ಲಿ ಉತ್ತಮ ಪ್ರಧಾನಮಂತ್ರಿ ಎಂದು ಹೇಗೆ ಪರಿಗಣಿಸುವಿರಿ.?

ಅಥವಾ

ರಜಪೂತ ಅರಸರು ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆ ವಿವರಿಸಿ.

35. ಮೊಹಮ್ಮದ್ ಪೈಗಂಬರರ ಜೀವನವನ್ನು ತಿಳಿಸಿರಿ.

36. ನಮ್ಮ ಸಂವಿಧಾನದ ಪ್ರಮುಖ ಲಕ್ಷಣಗಳನ್ನು ವಿವರಿಸಿ.

37. ಕರ್ನಾಟಕದ ಮಳೆಗಾಲವನ್ನು ಕುರಿತು ಬರೆಯಿರಿ.

## VI . 38..ಕರ್ನಾಟಕದ ನಕ್ಷೆಯನ್ನು ರಚಿಸಿ ಇವುಗಳನ್ನು ಗುರುತಿಸಿ. 1+4=5

ಎ)ಕರಾವಳಿ ಮೈದಾನ ಬಿ)ಮಲೆನಾಡು ಪ್ರದೇಶ ಸಿ)ಉತ್ತರ ಮೈದಾನ ಪ್ರದೇಶ ಡಿ)ದಕ್ಷಿಣ ಮೈದಾನ ಪ್ರದೇಶ

# ಮಾದರಿ ಉತ್ತರಗಳು

| | |
|---|---|
| 1) | ಬಿ) ಬೆತ್ಲಹ್ಯಾಂ |
| 2) | ಡಿ)ಮಧುರಾವಿಜಯಂ |
| 3) | ಎ) ಬಾಬು ರಾಜೇಂದ್ರ ಪ್ರಸಾದ್ |
| 4) | ಎ) ಕುಟುಂಬ |
| 5) | ಸಿ) ಚಿಕ್ಕ ಗಾತ್ರ |
| 6) | ಬಿ) 1973 |
| 7) | ಡಿ) ಬ್ಯಾಂಕಿಂಗ್ |
| 8) | ಎ) ಹೆನ್ರಿ ಫಯೋಲ್ |
| 9) | 1526 |
| 10) | ದ್ವೈತ ಸಿದ್ಧಾಂತ |
| 11) | ಜನವರಿ–28 1950 |
| 12) | ತಂದೆ–ತಾಯಿ,ಮಕ್ಕಳು,ಮೊಮ್ಮಕ್ಕಳ ನಡುವೆ ಉಂಟಾಗುವ ಸಂಬಂಧಗಳ ವ್ಯವಸ್ಥೆ |
| 13) | ಮಾರ್ಚ್–ಮೇ |
| 14) | ರೈಲುಮಾರ್ಗ,ರಸ್ತೆ,ವಸತಿ,ಕೈಗಾರಿಕೆ,ನೀರಾವರಿ ಯೋಜನೆಗಳು(ಯಾವುದಾದರೂ ಒಂದು) |
| 15) | ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಾದ ರೇಷ್ಮೆ,ತೋಟಗಾರಿಕೆ,ಸಶುಪಾಲನೆ,ಕೋಳಿಸಾಕಣೆ,ಮೀನುಗಾರಿಕೆ,ಪುಷ್ಪಕೃಷಿ ಮೊದಲಾದವುಗಳಲ್ಲಿ ತೊಡಗುವುದೇ ಪ್ರಾಥಮಿಕ ವಲಯ. |
| 16) | ಸಂಸ್ಥೆಯ ಗುರಿ ಮತ್ತು ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಸಂದರ್ಭ,ಅನುಭವ,ವಿವೇಚನೆ,ದೃಢತೆ, ಧೈರ್ಯ ಮತ್ತು ಸ್ಪಷ್ಟತೆಯಿಂದ ತಗೆದುಕೊಳ್ಳುವ ನಿರ್ಣಯಗಳನ್ನು ನಿರ್ಧಾರ ಎನ್ನುವರು. |
| 17) | # ಕಂದಾಯ ಸುಧಾರಣೆ # ರಾಜಧಾನಿಯ ವರ್ಗಾವಣೆ # ಸಾಂಕೇತಿಕ ನಾಣ್ಯ ಪ್ರಯೋಗ |
| 18) | # ಸಂಗಮ # ಸಾಳುವ # ತುಳುವ # ಅರವೀಡು |
| 19) | • ಸಮಾನತೆಯ ಹಕ್ಕು<br>• ಸ್ವಾತಂತ್ರ್ಯದ ಹಕ್ಕು<br>• ಶೋಷಣೆಯ ವಿರುದ್ಧದ ಹಕ್ಕು<br>• ಧಾರ್ಮಿಕ ಸ್ವಾತಂತ್ರ್ಯದ ಹಕ್ಕು<br>• ಸಾಂಸ್ಕೃತಿಕ ಮತ್ತು ವಿದ್ಯಾಭ್ಯಾಸದ ಹಕ್ಕು<br>• ಸಂವಿಧಾನ ಪರಿಹಾರ ಹಕ್ಕು<br>ಅಥವಾ<br>1.ಭಾರತದ ಪ್ರಜೆಯಾಗಿರಬೇಕು.<br>2.ಕನಿಷ್ಠ 25 ವರ್ಷ ವಯೋಮಿತಿ ಹೊಂದಿರಬೇಕು.<br>3.ಸರ್ಕಾರದ ಯಾವುದೇ ಹುದ್ದೆಯಲ್ಲಿರಬಾರದು.<br>4.ಮಾನಸಿಕ ಸ್ವಾಸ್ಥ್ಯ ಕಳೆದುಕೊಂಡಿರಬಾರದು.<br>5.ನ್ಯಾಯಾಲಯದಿಂದ ಶಿಕ್ಷೆಗೆ ಒಳಗಾಗಿರಬಾರದು.<br>6.ಸಂಸತ್ತು ಕಾಲಕಾಲಕ್ಕೆ ನಿಗದಿಪಡಿಸುವ ಅರ್ಹತೆ ಪಡೆದಿರಬೇಕು. |

| | |
|---|---|
| 20) | • ಕುಟುಂಬಗಳಿಂದಲೇ ನೆರೆಹೊರೆ,ಗ್ರಾಮ,ರಾಷ್ಟ್ರ ನಿರ್ಮಾಣ<br>• ಕುಟುಂಬ ಸದಸ್ಯರಿಗೆ ಸಾಮಾಜಿಕ ಹೊಣೆಗಾರಿಕೆ ಅರಿವು<br>• ಸಂಪ್ರದಾಯ,ನೈತಿಕ ನಿಯಮಗಳು,ವರ್ತನೆಗಳ ನಿಯಂತ್ರಣ<br>• ಕುಟುಂಬ ಸರ್ವವ್ಯಾಪಿ,ಶಾಶ್ವತ ಹಾಗೂ ಪರಂಪರಾಗತ ಘಟಕ<br>ಅಥವಾ<br>1.ಪಿತೃಪ್ರಧಾನ ಕುಟುಂಬ 2.ಮಾತೃಪ್ರಧಾನ ಕುಟುಂಬ 3.ಆಧುನಿಕ ಕೇಂದ್ರ ಕುಟುಂಬ |
| 21) | • ಬೆಂಗಳೂರು<br>• ಮೈಸೂರು<br>• ಬೆಳಗಾವಿ<br>• ಕಲಬುರಗಿ |
| 22) | # ಹೇಮಾವತಿ # ಹಾರಂಗಿ # ಲೋಕಪಾವನಿ # ಅರ್ಕಾವತಿ # ಶಿಂಷಾ # ಲಕ್ಷ್ಮಣತೀರ್ಥ # ಕಪಿಲೆ #ಸುವರ್ಣಾವತಿ |
| 23) | 1. ಗೃಹ ಘಟಕ 2. ಉದ್ಯಮ ಘಟಕ |
| 24) | ಎ) ಸಂಸ್ಥೆಯಲ್ಲಿ ಶಿಸ್ತು ಹಾಗೂ ದಕ್ಷತೆಯ ವಾತಾವರಣವನ್ನು ಕಲ್ಪಿಸಿ,<br>ಚಟುವಟಿಕೆಗಳು ಸಮರ್ಪಕವಾಗಿ ಹೊಂದಾಣಿಕೆಯಿಂದ ನಡೆಯುವಂತೆ ನೋಡಿಕೊಳ್ಳುವುದು<br>ಬಿ) ಪೂರ್ವಭಾವಿ ಯೋಜನೆಗಳಿಗನುಸಾರವಾಗಿ ಮತ್ತು ನಿರಂತರವಾಗಿ<br>ಚಟುವಟಿಕೆಗಳು ಮುಂದುವರೆಯುವಂತೆ ಮಾಡುವುದು |
| 25) | 1)ದೇವರ ಸ್ಥಾನದಲ್ಲಿ ತಂದೆಯನ್ನು ಕಲ್ಪಿಸಿಕೊಳ್ಳುವುದು<br>2)ಮಾನವ ಸಂಕುಲದ ಭ್ರಾತೃತ್ವ<br>3)ಆಡಂಬರದ ಧಾರ್ಮಿಕ ಆಚರಣೆಗಳಲ್ಲಿ ನಂಬಿಕೆ ಇಟ್ಟಿರಲಿಲ್ಲ<br>4) ಮಾನವನು ತನ್ನ ತಪ್ಪಿಗೆ ಪಶ್ಚಾತ್ತಾಪ ಪಟ್ಟರೆ, ಅದಕ್ಕೆ ದೇವರಿಂದ ಕ್ಷಮಾಪಣೆ ಇದೆ<br>5) ಪರರಿಂದ ಯಾವುದನ್ನು ಬಯಸದೇ ನಾವು ಅವರ ಸೇವೆಯನ್ನು ಮಾಡಬೇಕು<br>6) ಮಾನವನ ಸೇವೆಯು ದೇವರ ಸೇವೆಗೆ ಸಮ.<br>ಅಥವಾ<br>• ಭಾರತದಲ್ಲಿ 'ಇಂಡೋ–ಇಸ್ಲಾಮಿಕ್' ವಾಸ್ತುಶಿಲ್ಪ ಶೈಲಿ ಪರಿಚಯಿಸಿದರು.<br>• ಕಮಾನುಗಳು,ಗುಮ್ಮಟಗಳು ಹಾಗೂ ಮಿನಾರ್ ಗಳು ಇದರ ಮುಖ್ಯ ಲಕ್ಷಣಗಳು.<br>• ಕೋಟೆ,ಮಸೀದಿ,ಅರಮನೆ,ಸಾರ್ವಜನಿಕ ಕಟ್ಟಡ,ಮದರಸಾ,ಧರ್ಮಶಾಲೆಗಳ ನಿರ್ಮಿಸಿದರು<br>• ಉದಾಹರಣೆಗೆ: ದೆಹಲಿಯ ಕುವತ್–ಉಲ್–ಇಸ್ಲಾಂ ಮಸೀದಿ,<br>• ಕುತುಬ್ ಮಿನಾರ್,ಅಲೈ ದರವಾಜಾ,ಜಮೈತ್ ಖಾನಾ ಮಸೀದಿಗಳು |
| 26) | • 'ಅದ್ವೈತ' ಎಂದರೆ ಏಕ ಅಥವಾ ಒಂದೇ ಎಂದರ್ಥ.<br>• ಇದರ ಪ್ರಕಾರ ಜೀವಾತ್ಮ ಮತ್ತು ಪರಮಾತ್ಮ ಬೇರೆಬೇರೆಯಲ್ಲ ಎರಡೂ ಒಂದೇ.<br>• ಬ್ರಹ್ಮನೊಬ್ಬನೆ ಸತ್ಯ,ಉಳಿದ ಜಗತ್ತು ಮಿಥ್ಯ.ಜಗತ್ತು ಒಂದು ಮಾಯೆ.<br>• ಪರಮ ಸತ್ಯವಾದ ಬ್ರಹ್ಮನೊಡನೆ ನಮ್ಮ ಜೀವಾತ್ಮವನ್ನು ವಿಲೀನಗೊಳಿಸಬೇಕು. ಆಗ ಎಲ್ಲರಿಗೂ ಮೋಕ್ಷ ಪ್ರಾಪ್ತಿ ಸಾಧ್ಯ. |

| | |
|---|---|
| | • ಶಂಕರರು ಜ್ಞಾನಮಾರ್ಗದ ಪ್ರವರ್ತಕರಾಗಿದ್ದಾರೆ. ಜೀವಾತ್ಮನಿಗೆ ಪ್ರತ್ಯೇಕ ಅಸ್ತಿತ್ವವಿಲ್ಲವೆಂದು ಪ್ರತಿಪಾದಿಸಿದರು.<br>• ಶಂಕರರು ಇದನ್ನೇ "ನಾನೇ ಬ್ರಹ್ಮನು" ಅಥವಾ "ಅಹಂಬ್ರಹ್ಮಾಸ್ಮಿ" ಎಂಬುದಾಗಿ ಪ್ರತಿಪಾದಿಸಿದರು.<br>• ಸಕಲ ಜೀವರಾಶಿಗಳಲ್ಲಿರುವ ಚೇತನ ಶ್ರೇಷ್ಠವಾದದು ಎಂದು ಪ್ರತಿಪಾದಿಸುವ ಮೂಲಕ ಅಸ್ತಿತ್ವದ ನೆಲೆಯಲ್ಲಿ ಸಮಾನತೆಯನ್ನು ಬೋಧಿಸಿದರು.<br>• ಬ್ರಹ್ಮವು ಸತ್ಯ, ಅದು ನಿರ್ಗುಣ, ಅದಕ್ಕೆ ಲಕ್ಷಣಗಳಿಲ್ಲ ಮತ್ತು ಅವಕಾಶವಿಲ್ಲವೆಂದು ಪ್ರತಿಪಾದಿಸಿದರು. |
| 27) | • ಹೊಸ ಜಲಮಾರ್ಗಗಳ ಮೂಲಕ ಆಗಮಿಸಿದ ಐರೋಪ್ಯರು ಇಲ್ಲಿನೆಲೆಗಳನ್ನು ಸ್ಥಾಪಿಸಲು ಆರಂಭಿಸಿದರು.<br>• ಬಹಮನಿ ರಾಜ್ಯದ ಐದು ಷಾಹಿ ರಾಜ್ಯಗಳು ಕೃಷ್ಣದೇವರಾಯನ ವಿರುದ್ಧ ಕದನಕ್ಕಿಳಿದರು.<br>• ಉಮ್ಮತ್ತೂರು ಹಾಗೂ ಒರಿಸ್ಸಾದ ಅರಸರುವಿಜಯನಗರದ ಮೇಲೆ ಹಗೆತನವನ್ನು ಸಾಧಿಸುತ್ತಲೇ ಇದ್ದರು. |
| 28) | • ರಾಜ್ಯಸಭೆಯು 250 ಸದಸ್ಯರನ್ನು ಒಳಗೊಂಡಿದೆ.<br>• 238 ಸದಸ್ಯರು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ವಿಧಾನಸಭೆಯ ಸದಸ್ಯರಿಂದ ಆಯ್ಕೆಯಾದರೆ,<br>• ಉಳಿದ 12 ಸದಸ್ಯರು ಸಾಹಿತ್ಯ, ಕಲೆ, ವಿಜ್ಞಾನ ಮತ್ತು ಸಮಾಜ ಸೇವೆಯಲ್ಲಿ ವಿಶೇಷ ಅನುಭವ ಪಡೆದವರನ್ನು ರಾಷ್ಟ್ರಪತಿಗಳು ನಾಮಕರಣ ಮಾಡುತ್ತಾರೆ.<br>• ಇದನ್ನು ಹಿರಿಯರ ಸದನವೆಂದೂ ಕರೆಯುತ್ತಾರೆ.<br>• ರಾಜ್ಯಸಭೆಯು ಖಾಯಂ ಸದನವಾಗಿದ್ದು, ಲೋಕಸಭೆಯಂತೆ ವಿಸರ್ಜಿಸಲಾಗದು.<br>• ಆದರೆ ಸದಸ್ಯರ ಅಧಿಕಾರ ಅವಧಿ 6 ವರ್ಷಗಳಾಗಿದ್ದು, ಪ್ರತಿ 2 ವರ್ಷಕ್ಕೊಮ್ಮೆ ಮೂರನೇ ಒಂದು ಭಾಗದಷ್ಟು ಸದಸ್ಯರು ನಿವೃತ್ತರಾಗುತ್ತಾರೆ ಮತ್ತು ಅಷ್ಟೆ ಸದಸ್ಯರು ಆಯ್ಕೆಯಾಗುತ್ತಾರೆ.<br>• ಸದಸ್ಯರು ತಮ್ಮ ಸ್ಥಾನದಲ್ಲಿ ಮುಂದುವರೆಯಲು ಇಷ್ಟವಿಲ್ಲದಿದ್ದರೆ ಸಭಾಧ್ಯಕ್ಷರಿಗೆ ರಾಜೀನಾಮೆ ನೀಡಬಹುದು.<br>ಅಥವಾ<br>1)ಭಾರತದ ಪ್ರಜೆಯಾಗಿರಬೇಕು.<br>(2)35 ವರ್ಷಕ್ಕಿಂತ ಮೇಲ್ಪಟ್ಟಿರಬೇಕು.<br>(3) ಯಾವುದೇ ಸರ್ಕಾರಿ ಹುದ್ದೆಯನ್ನು ಹೊಂದಿರಬಾರದು.<br>(4) ಸಂಸತ್ ಅಥವಾ ರಾಜ್ಯ ಶಾಸಕಾಂಗದ ಸದಸ್ಯರಾಗಿರಬಾರದು. ಸದಸ್ಯತ್ವ ಹೊಂದಿದ್ದರೆ ರಾಜ್ಯಪಾಲರಾಗಿ ನೇಮಕವಾದ ನಂತರ ಸದಸ್ಯತ್ವ ತ್ಯಜಿಸಬೇಕು.<br>ರಾಜ್ಯಪಾಲರ ಅಧಿಕಾರ ಅವಧಿ 5 ವರ್ಷ. ಆದರೆ ಮುಂದಿನ ರಾಜ್ಯಪಾಲರು ನೇಮಕವಾಗುವವರೆಗೆ ಸಾಮಾನ್ಯವಾಗಿ ಅಧಿಕಾರದಲ್ಲಿ ಮುಂದುವರೆಯುತ್ತಾರೆ. ಕೇಂದ್ರ ಮಂತ್ರಿಮಂಡಲದ ಸಲಹೆ ಮೇರೆಗೆ ರಾಷ್ಟ್ರಪತಿಗಳು ರಾಜ್ಯಪಾಲರನ್ನು ಅವಧಿಗೆ ಮುಂಚಿತವಾಗಿಯೇ ವಾಪಸ್ ಕರೆಸಿಕೊಳ್ಳಬಹುದು. |
| 29) | • ದೊಡ್ಡ ಗಾತ್ರ<br>• ಆಸ್ತಿ ಹೊಣೆಗಾರಿಕೆ<br>• ವಾಸ ಸ್ಥಳ<br>• ಅಡುಗೆ ಮನೆ<br>• ಧರ್ಮ<br>• ಸ್ವಯಂಪೂರ್ಣತೆ<br>• ಅಧಿಕಾರ ಸಂರಚನೆ |
| 30) | • ನಮ್ಮ ರಾಜ್ಯದ ಪಶ್ಚಿಮ ಘಟ್ಟಗಳನ್ನೇ ಮಲೆನಾಡು ಎನ್ನುವರು. ಇದನ್ನೇ 'ಸಹ್ಯಾದ್ರಿ ಬೆಟ್ಟ'ಗಳೆಂತಲೂ ಕರೆಯುವರು.<br>• ಮಲೆನಾಡು ಉತ್ತರ ದಕ್ಷಿಣವಾಗಿ ಕರಾವಳಿಗೆ ಸಮಾನಾಂತರವಾಗಿ ಹಬ್ಬಿವೆ. |

| | |
|---|---|
| | • ಪಶ್ಚಿಮ ಭಾಗವು ಕಡಿದಾದ ಇಳಿಜಾರನ್ನು ಹೊಂದಿದ್ದು,ಪೂರ್ವದ ಕಡೆಗೆ ಹೋದಂತೆ ನಿಧಾನವಾಗಿ ಹಂತ ಹಂತವಾಗಿ ಇಳಿಜಾರಾಗುತ್ತಾ ಹೋಗುತ್ತದೆ. ಆದ್ದರಿಂದಲೇ ಇದನ್ನು ಘಟ್ಟಗಳೆಂದು ಕರೆಯುತ್ತಾರೆ.<br>• ಇದರ ಉದ್ದ 650 ಕಿ.ಮೀ. ಅಗಲ 50–76 ಕಿ.ಮೀ.ಗಳು.<br>• ಸರಾಸರಿ ಎತ್ತರವು ಸಮುದ್ರ ಮಟ್ಟಕ್ಕೆ 900 ರಿಂದ 1500 ಮೀ.ಗಳು.<br>• ಇದು ಅರಬ್ಬೀ ಸಮುದ್ರದಿಂದ ಬೀಸುವ ಮಳೆ ಮಾರುತಗಳನ್ನು ತಡೆದು 200 ಸೆಂ.ಮೀ.ಗಿಂತ ಹೆಚ್ಚು ಮಳೆ |
| 31) | • ಕರ್ನಾಟಕದ ಕಾಡುಗಳಲ್ಲಿ ವಿಶೇಷವಾಗಿ ಶ್ರೀಗಂಧದ ಮರಗಳು ಬೆಳೆಯುತ್ತವೆ.<br>• ಇದರಿಂದ ಸುಗಂಧ ದ್ರವ್ಯ, ಕುಸುರಿ ಕೆಲಸದ ಕುಶಲ ವಸ್ತುಗಳು, ಸಾಬೂನು, ಔಷಧಿಗಳನ್ನು ತಯಾರಿಸಲಾಗುವುದು.<br>• ಇವು ವಿಶ್ವವಿಖ್ಯಾತವಾಗಿದ್ದು, ದೇಶೀಯ ಅಪಾರವಾದ ಬೇಡಿಕೆ ಪೂರೈಸುವುದಲ್ಲದೆ ವಿದೇಶಗಳಿಗೂ ರಫ್ತು ಮಾಡಲಾಗುತ್ತದೆ.<br>• ಆದ್ದರಿಂದ ಕರ್ನಾಟಕವು 'ಶ್ರೀಗಂಧದ ನಾಡು' ಎಂದೇ ಪ್ರಸಿದ್ಧಿ ಪಡೆದಿದೆ.<br>ಅಥವಾ<br>• ಶಿವನಸಮುದ್ರ, ಶಿಂಷಾ (ಕಾವೇರಿ ನದಿ)<br>• ಮಹಾತ್ಮಗಾಂಧಿ ಜಲವಿದ್ಯುತ್ ಕೇಂದ್ರ (ಶರಾವತಿ ನದಿ)<br>• ಸೂಪ ನಾಗಝರಿ<br>• ಕದ್ರ –ಕೊಡಸಳ್ಳಿ (ಕಾಳಿನದಿ)<br>• ವಾರಾಹಿ ಮತ್ತು ಮಾರಿಕಣಿವೆ<br>• ಭದ್ರ–ತುಂಗಭದ್ರಾ ಮತ್ತು ಆಲಮಟ್ಟಿ ಯೋಜನೆಗಳು. |
| 32) | • ಶೇ.52 ರಷ್ಟು ಜನರ ಜೀವನಾಧಾರಿತ ವೃತ್ತಿ.<br>• ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನು ಒದಗಿಸುತ್ತದೆ<br>• ಜನರಿಗೆ ಆಹಾರ ಮತ್ತು ಪ್ರಾಣಿಗಳಿಗೆ ಮೇವನ್ನು ಒದಗಿಸುತ್ತದೆ.<br>• ರೈತರಿಗೆ ಬಂಡವಾಳ ಸಂಗ್ರಹಕ್ಕೆ ಸಹಕಾರಿ<br>• ನಮ್ಮ ರಾಜ್ಯದ ಆರ್ಥಿಕತೆಯ ಬೆನ್ನೆಲುಬು |
| 33) | • ಸಮಸ್ಯೆಯನ್ನು ವಿಶ್ಲೇಷಿಸುವುದು<br>• ಕಾರ್ಯಗತ ಮಾಡಲು ಯೋಜನೆ ರೂಪಿಸುವುದು.<br>• ಧೈರ್ಯ ಮತ್ತು ತಾಳ್ಮೆಗಳನ್ನು ಪಾಲಿಸುವುದು.<br>• ಮುಂದಾಲೋಚನೆಯನ್ನು ಗಮನದಲ್ಲಿಡುವುದು.<br>• ವಿವೇಕಯುಕ್ತ ನಿರ್ಧಾರವನ್ನು ಶೀಘ್ರದಲ್ಲಿ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಿರುವುದು. |
| 34) | • ಮಹಮ್ಮದ್ ಗವಾನನು ನಿಷ್ಠೆ, ನಿಸ್ವಾರ್ಥತೆಯಿಂದ ಆಳ್ವಿಕೆ ನಡೆಸಿದನು.<br>• ಪ್ರಧಾನ ಮಂತ್ರಿಯಾಗಿ ಬಹಮನಿ ರಾಜ್ಯವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದನು.<br>• ಕೈರೋದಲ್ಲಿ ಇಸ್ಲಾಂ ಮತಶಾಸ್ತ್ರ ಮತ್ತು ಕಾನೂನು ಅಭ್ಯಸಿಸಿ, ಅರಬ್ಬೀ, ಪಾರಸೀ ಭಾಷೆಗಳಲ್ಲಿ ಪಾಂಡಿತ್ಯ.<br>• ಬಹಮನಿ ಸುಲ್ತಾನರಾದ ಹುಮಾಯೂನ್, ನಿಜಾಂಷಾ ಹಾಗೂ ಮೂರನೇ ಮಹಮದ್‌ಷಾನ ಆಳ್ವಿಕೆಯ ಕಾಲದಲ್ಲಿ ಮಂತ್ರಿಯಾಗಿ, ಪ್ರಧಾನ ಮಂತ್ರಿಯಾಗಿ ಸೇವೆ ಸಲ್ಲಿಸಿದನು.<br>• ಇವನು ತನ್ನ ದಿಗ್ವಿಜಯಗಳು ಹಾಗೂ ಅಚ್ಚುಕಟ್ಟಾದ ಆಡಳಿತ ಕ್ರಮದಿಂದ ಬಹಮನಿ ರಾಜ್ಯದ ಕೀರ್ತಿ ಹೆಚ್ಚಿಸಿದನು.<br>• ಗವಾನನು ಕೊಂಕಣ, ಗೋವ ಮತ್ತು ಬೆಳಗಾವಿಯನ್ನು ವಶಪಡಿಸಿಕೊಂಡನು.<br>• ಓರಿಸ್ಸಾದ ಮೇಲೆ ದಾಳಿ ಮಾಡಿ, ಅಲ್ಲಿಂದ ಕೊಂಡವೀಡು ಪ್ರದೇಶವನ್ನು ವಶಪಡಿಸಿಕೊಂಡನು. |

| | |
|---|---|
| | • ಸಾ.ಶ. 1481ರಲ್ಲಿ ಕಂಚಿಯ ಮೇಲೆ ದಾಳಿ ಮಾಡಿ ಅಪಾರ ಸಂಪತ್ತನ್ನು ಲೂಟಿ ಮಾಡಿದನು.<br>• ಬಹಮನಿ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಕಾರಣನಾದನು.<br>ಅಥವಾ<br>• ರಜಪೂತ ಅರಸರು ಸ್ವತಃ ವಿದ್ವಾಂಸರು ಆಗಿದ್ದಾರೆ.<br>• ಭೋಜ, ಮುಂಜ, ಮೊದಲಾದ ಅರಸರೇ ಅನೇಕ ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ.<br>• ಮುಂಜ ರಾಜನು ಪದ್ಮಗುಪ್ತ, ಹಲಾಯುಧ ಎಂಬ ಕವಿಗಳಿಗೆ ಆಶ್ರಯ ನೀಡಿದ್ದನು.<br>• ಭೋಜ ರಾಜನ ಕಾಲದಲ್ಲಿ ಶಾಂತಿಸೇನ, ಪ್ರಭಾಚಂದ್ರ ಸೂರಿ, ಘನಪಾಲ ಎಂಬ ಜೈನ ಪಂಡಿತರಿಗೆ ಆಶ್ರಯ<br>• ಜಯದೇವನ 'ಗೀತಗೋವಿಂದ', ಭಾರವಿಯ 'ಕಿರಾತಾರ್ಜುನೀಯ', ಭರ್ತೃಹರಿಯ 'ರಾವಣ ವಧಾ', ಮಹೇಂದ್ರಪಾಲನ 'ಕಾವ್ಯ ಮೀಮಾಂಸೆ' ಕಾವ್ಯಗಳು ಇವರ ಕಾಲದಲ್ಲಿ ರಚನೆಯಾದವು.<br>• ರಾಜಶೇಖರ ರಚಿಸಿದ 'ಬಾಲ ರಾಮಾಯಣ' ಮತ್ತು 'ಕರ್ಪೂರ ಮಂಜರಿ', ಭವಭೂತಿ ರಚಿಸಿದ 'ಮಹಾವೀರಚರಿತ', ಹಾಗೂ 'ಉತ್ತರರಾಮಚರಿತ', ಐತಿಹಾಸಿಕ ಕೃತಿಗಳಾದ ಕಲ್ಹಣನ 'ರಾಜ ತರಂಗಿಣಿ', ಜಯನಿಕನ 'ಪೃಥ್ವಿರಾಜ ವಿಜಯ' ಮತ್ತು ಹೇಮಚಂದ್ರನ 'ಕುಮಾರಪಾಲಚರಿತ' ಮಹತ್ವದ್ದಾಗಿವೆ.<br>• ರಜಪೂತ ಅರಸರ ಜೀವನ ಕೃತಿಗಳಾದ 'ಪೃಥ್ವಿರಾಜ ರಾಸೋ'ವನ್ನು ಚಂದ್ ಬರದಾಯಿ ಮತ್ತು 'ಭೋಜ ಪ್ರಬಂಧ'ವನ್ನು ಬಲ್ಲಾಳ ರಚಿಸಿದರು. ಈ ಕಾಲದಲ್ಲಿ ಗುಜರಾತಿ, ರಾಜಸ್ತಾನಿ, ಹಿಂದಿ ಭಾಷೆಗಳು ಅಭಿವೃದ್ಧಿಯಾದವು |
| 35) | • ಇಸ್ಲಾಂಧರ್ಮದ ಸ್ಥಾಪಕರಾದ ಮಹಮ್ಮದ್ ಪೈಗಂಬರ್‌ರವರು ಸಾ.ಶ.570ರಲ್ಲಿ ಮೆಕ್ಕಾದಲ್ಲಿ ಜನಿಸಿದರು.<br>• ತಂದೆ ಅಬ್ದುಲ್ಲಾ ಹಾಗೂ ತಾಯಿ ಅಮೀನಾ. ಬಾಲ್ಯದಲ್ಲಿ ತನ್ನ ತಂದೆತಾಯಿಯನ್ನು ಕಳೆದುಕೊಂಡು ಚಿಕ್ಕಪ್ಪನ ಆಶ್ರಯದಲ್ಲಿ ಬೆಳೆದರು.<br>• ವ್ಯಾಪಾರಕ್ಕೆ ಮೆಕ್ಕಾ ಹಾಗೂ ಸಿರಿಯಾ ಪ್ರದೇಶಗಳಿಗೆ ಭೇಟಿ ನೀಡುತ್ತಿದ್ದರು. ಆಗ ಮೆಕ್ಕಾದ ಶ್ರೀಮಂತ ವಿಧವೆ ಖದೀಜರ ಪರಿಚಯವಾಗಿ ಅವರ ಬಳಿ ಸೇವಾ ನೌಕರಿಗೆ ಸೇರಿದರು. ಮುಂದೆ ಆಕೆಯೊಂದಿಗೆ ವಿವಾಹವಾಯಿತು.<br>• ಅವರಿಗೆ ಇಬ್ಬರು ಪುತ್ರರು ಹಾಗೂ ನಾಲ್ವರು ಪುತ್ರಿಯರು ಇದ್ದರು.<br>• ಜವಳಿ ವ್ಯಾಪಾರಕ್ಕೆಂದು ಮಹಮ್ಮದರು ಬೇರೆ ಬೇರೆ ಪ್ರದೇಶಗಳಿಗೆ ಭೇಟಿ ನೀಡುತ್ತಿದ್ದಾಗ ಅವರಿಗೆ ಅಲ್ಲಿನ ಕ್ರೈಸ್ತ ಮತ್ತು ಯಹೂದಿಗಳ ಧರ್ಮಗಳ ಸರಳತೆ ಹಾಗು ಏಕದೇವತಾರಾಧನೆಯ ಪರಿಚಯವಾಯಿತು.<br>• ಮೆಕ್ಕಾದ ಬಳಿಯ ಹೀರಾ ಎನ್ನುವ ಬೆಟ್ಟದ ತಪ್ಪಲಿಗೆ ಹೋಗಿ ಧ್ಯಾನಾಸಕ್ತರಾಗುತ್ತಿದ್ದರು. ಜ್ಞಾನೋದಯವನ್ನು ಪಡೆದ ಪೈಗಂಬರರನ್ನು ಜನರು ದೇವದೂತನೆಂದು ಕರೆದರು.<br>• ಇವರ ತತ್ವಗಳು ಬಹುಬೇಗ ಜನರ ಆಕರ್ಷಣೆ ಪಡೆದು ಬಹಳಷ್ಟು ಜನರು ಇವರ ಅನುಯಾಯಿಗಳಾದರು. ಕೆಲವೊಮ್ಮೆ ಧ್ಯಾನಾಸಕ್ತರಾಗಿದ್ದಾಗ ಕೆಲವು ಸಂದೇಶಗಳನ್ನು ತನ್ನ ಅನುಯಾಯಿಗಳಿಗೆ ತಿಳಿಸುತ್ತಿದ್ದರು.<br>• ದೇವರ ಸಂದೇಶಗಳೆಂದು ಪರಿಗಣಿಸಿ, ಅವರ ಶಿಷ್ಯರು ಸಂಗ್ರಹಿಸಿದರು. ಆ ದಿವ್ಯ ಸಂದೇಶಗಳ ಸಂಗ್ರಹ, ಇಸ್ಲಾಂಧರ್ಮದ ಪವಿತ್ರ ಗ್ರಂಥ 'ಕುರಾನ್' ಆಗಿದೆ.<br>• ಕ್ರಮೇಣ ಪೈಗಂಬರರ ತತ್ವಗಳು ಅರಬ್ ಪ್ರದೇಶದಾದ್ಯಂತ ಹರಡಿದವು.. |
| 36) | • ಲಿಖಿತ ಮತ್ತು ಬೃಹತ್ ಸಂವಿಧಾನ<br>• ಭಾಗಶಃ ನಮ್ಯ ಮತ್ತು ಭಾಗಶಃ ಅನಮ್ಯ ಸಂವಿಧಾನ<br>• ಸಂಸದೀಯ ಸರ್ಕಾರ ಪದ್ಧತಿ<br>• ಗಣತಂತ್ರ ವ್ಯವಸ್ಥೆ #ಸಂಯುಕ್ತ ಪದ್ಧತಿ #ಮೂಲಭೂತ ಹಕ್ಕುಗಳು #<br>• ಮೂಲಭೂತ ಕರ್ತವ್ಯಗಳು<br>• ರಾಜ್ಯ ನಿರ್ದೇಶಕ ತತ್ವಗಳು # ಏಕ ಪೌರತ್ವ # ವಯಸ್ಕ ಮತದಾನ ಪದ್ಧತಿ # ಪಕ್ಷ ಪದ್ಧತಿ |

37)

- 'ನೈಋತ್ಯ ಮಾನ್ಸೂನ್ ಮಾರುತಗಳ ಕಾಲ' ಎಂತಲೂ ಕರೆಯುತ್ತಾರೆ.
- ಅರಬ್ಬಿಸಮುದ್ರದ ಮೇಲಿಂದ ಬೀಸುವ ತೇವಾಂಶಭರಿತ ಮಾರುತಗಳನ್ನು ಮಲೆನಾಡು ಘಟ್ಟಗಳು ತಡೆದು ಅಧಿಕ ಮಳೆ
- ಪೂರ್ವದ ಕಡೆಗೆ ಹೋದಂತೆಲ್ಲಾ ಮಳೆಯ ಪ್ರಮಾಣ ಕಡಿಮೆಯಾಗುತ್ತದೆ. ಹೀಗಾಗಿ ಪೂರ್ವದ ಮೈದಾನವು ಮಳೆ ನೆರಳಿನ ಪ್ರದೇಶವಾಗಿ ಪರಿಣಮಿಸುತ್ತದೆ.
- ಆಗುಂಬೆ ರಾಜ್ಯದ ಅಧಿಕ ಮಳೆ ಬೀಳುವ ಸ್ಥಳವಾಗಿದೆ. ಇದನ್ನು ದಕ್ಷಿಣದ ಚಿರಾಪುಂಜಿ ಎನ್ನುವರು.
- ಭಾಗಮಂಡಲ ಮತ್ತು ಹುಲಿಕಲ್‌ಗಳು ಇತರ ಅಧಿಕ ಮಳೆ ಪಡೆಯುವ ಸ್ಥಳಗಳಾಗಿವೆ.
- ಚಿತ್ರದುರ್ಗದ ಚಳ್ಳಕೆರೆ ಸಮೀಪದ ನಾಯಕನ ಹಟ್ಟಿ ಅತಿ ಕಡಿಮೆ ಮಳೆ ಬೀಳುವ ಸ್ಥಳ.
- ಈ ಅವಧಿಯಲ್ಲಿ ರಾಜ್ಯಾದ್ಯಂತ ಉಷ್ಣಾಂಶ ಹೆಚ್ಚು, ಜೊತೆಗೆ ತೇವಾಂಶವೂ ಹೆಚ್ಚಾಗಿರುತ್ತದೆ.
- ಮೋಡ ಕವಿದ ಪರಿಸ್ಥಿತಿ ಕಂಡುಬರುವುದು. ಈ ಋತುಮಾನದಲ್ಲಿ ಕರ್ನಾಟಕಕ್ಕೆ ಶೇಕಡ **80** ರಷ್ಟು ಮಳೆಯಾಗುತ್ತದೆ.
- ರಾಜ್ಯದ ಮುಂಗಾರು ಬೆಳೆಗಳ ಬೇಸಾಯಕ್ಕೆ ಈ ಕಾಲ ನೆರವಾಗುವುದು.

38)

